**ವ್ಯಾಖ್ಯಾನ**

# <u>ಹ್ಯಾಗೆ ಮೆಚ್ಚಿಸಲಿ ಅರ್ಚಿಸಲಿ ನಿನ್ನ</u>

ಹ್ಯಾಗೆ ಮೆಚ್ಚಿಸಲಿ ಅರ್ಚಿಸಲಿ ನಿನ್ನ
ನಾಗಶಯನನೆ ನಾರದ ವಂದ್ಯನೇ ದೇವಾ || ಪ ||

ಮಂಗಳಾಭಿಷೇಕಕೆ ಉದಕ ತರುವೆನೆನೆ
ಗಂಗೆಯಂಗುಷ್ಟದಿ ಪಡೆದಿರುವೇ
ಸಂಗೀತ ಕೀರ್ತನೆ ಪಾಡುವೆನೆಂದರೆ
ತುಂಬುರು ನಾರದರು ಪಾಡುತಿಹರೋ ದೇವ || 1 ||

ಪುಷ್ಪವ ತಂದು ನಿನಗರ್ಪಿಸುವೆನೆಂದರೆ
ಪುಷ್ಪ ಪಲ್ಲವಿಸಿದೆ ಹೊಕ್ಕುಳಲಿ
ಇಪ್ಪತ್ತೆತ್ತಿಸಕೋಟಿ ದೇವರ್ಕಳದ
ನೊಪ್ಪಿ ನೈವೇದ್ಯ ನೀಡಲು ತೃಪ್ತನಾಗುವೆ || ೨ ||

ಕೋಟಿ ಸೂರ್ಯರ ಪ್ರಭೆ ಮಿಗಿಲಾದಾತನಿಗೆಂದು
ದೀಪವನು ಹಚ್ಚಿದರೆ ಬೆಳಕಹುದೇ
ಸಾಟಿಗಾಣದೆ ಲಕ್ಷ್ಮಿ ಉರಸ್ಥಳವಾಗಿರೆ
ಲೋಷ್ಟ ಕಾಸು ಎಂತು ಕಾಣಿಕೆ ನೀಡೆಲೋ || ೩ ||

ಹಾಸಿಗೆಯನು ತಂದು ಹಾಸುವೆನೆಂದರೆ
ಶೇಷನ ಮ್ಯಾಲೆ ನೀ ಪವಡಿಸಿರ್ಪೆ
ಬೀಸಣಿಗೆಯ ತಂದು ಬೀಸುವೆನೆಂದರೆ
ಬೀಸುತಿಹನು ಖಗ ತನ್ನ ಪಕ್ಕದಲೀ || ೪ ||

ನಿತ್ಯ ಗುಣಾರ್ಣವ ನಿಜಗುಣ ಪರಿಪೂರ್ಣ
ಸಚ್ಚಿದಾನಂದ ಸನಕಾದಿವಂದ್ಯ
ಮುಕ್ತಿದಾಯಕ ನಮ್ಮ ಪುರಂದರ ವಿಠಲ
ಭಕ್ತಿದಾಯಕನೆಂದು ಸ್ತುತಿಸಿ ಕೊಂಡಾಡುವೆನೋ || ೫ ||

**ಕೀರ್ತನೆಯ ಚಿಂತನೆ:**

ಶ್ರೀಹರಿಯನ್ನು ಅರ್ಚಿಸ ಬೇಕು. ಆರಾಧಿಸ ಬೇಕು. ಮೆಚ್ಚಿಸ ಬೇಕು.
ಯಾಕೆ?
**'ತತ್ ಪ್ರಸಾದಾದೇವ ಮುಚ್ಯತೇ'** - ಸಂತುಷ್ಟನಾದ ಹರಿಯ ಪ್ರಸಾದವೇ ಪರಮ ಪುರುಷಾರ್ಥ ಪ್ರಾಪ್ತಿ. ಅದಕ್ಕಾಗಿ ಮೆಚ್ಚಿಸಿ ಹರಿ ಒಲುಮೆ ಪಡೆಯಬೇಕು.

ಸರಿ, ಅವನನ್ನು ಮೆಚ್ಚಿಸಬೇಕು.
ಆದರೆ ಪರಮಪುರುಷನಾದ ಅವನೆಲ್ಲಿ? ಪಾಮರ ಮನುಜನಾದ ನಾನೆಲ್ಲಿ? ಅವನ ಸೇವಿಸಲು, ಮೆಚ್ಚಿಸಲು ಕೋಟಿ ಕೋಟಿ ಭೃತ್ಯರು ಸಾಲುಗಟ್ಟಿ ನಿಂತಿಹರು. ಬ್ರಹ್ಮ ರುದ್ರಾದಿ ಪ್ರಮುಖರು, ತಮ್ಮ ಹೊನ್ನ ಕಿರೀಟ ಅವನ ಪಾದಪೀಠಕ್ಕೆ ಘಟ್ಟಿಸಿ ಶಿರಬಾಗಿ ಆರಾಧಿಸಲು ಗಟ್ಟಿಯಾಗಿ ನಿಂತಿಹರು.

ಅದೂ ಬಿಡಿ. ನಿತ್ಯ ಮುಕ್ತೆ, ನಿತ್ಯಾವಿಯೋಗಿನಿ, ವಕ್ಷೋನಿವಾಸಿ, ಪಟ್ಟದ ರಾಣಿ ಶ್ರೀರಮಣಿ ಟೊಂಕ ಕಟ್ಟಿ ನಿಂತಿದ್ದಾಳೆ. ಭೃತ್ಯರನ್ನು ಬದಿಗೆ ಸರಿಸಿದ್ದಾಳೆ. ಆ ಕೆಲಸ ಈ ಕೆಲಸ ಎನ್ನದೇ ಸರ್ವಸೇವೆ ತಾನೇ ಸತತ ಮಾಡುತ್ತಿದ್ದಾಳೆ.

ಇಂಥ ವೈಭವ ಶ್ರೀಹರಿಯದು. ಪಾಮರ ಮನುಜ ನಾನು. ಎಂತು ಮೆಚ್ಚಿಸುವದು?
ಹೀಗೆ ಪುರಂದರದಾಸರು ಹರಿಯ ಮೆಚ್ಚಿಸುವ ಬಗೆಗಳ ಹುಡುಕುವ ನೆಪ ಮಾಡುತ್ತಾರೆ. ಆತನ ಅಪಾರ ಮಹಿಮೆ ಸಾರುತ್ತಾರೆ. ತಾರತಮ್ಯ ಹೇಳುತ್ತಾರೆ.

**ಹ್ಯಾಗೆ ಮೆಚ್ಚಿಸಲಿ ಅರ್ಚಿಸಲಿ ನಿನ್ನ**
**ನಾಗಶಯನನೆ ನಾರದ ವಂದ್ಯನೇ ದೇವಾ || ಪ ||**

ದೇವ–ದ್ಯು–ಕ್ರೀಡಾ. ಈ ಜಗತ್ತು ನಿನಗೆ ಅನಾಯಾಸದ ಕ್ರೀಡೆ. ಈ ಜಗದ ಸೃಷ್ಟಿ ಸ್ಥಿತಿ ಲಯಾದಿಗಳ ಕರ್ತಾ ನೀನು. ಲೇಸು ಆಯಾಸವಿಲ್ಲದೇ ಮಾಡುವಿ. ಅದು ನಿನ್ನ ವೈಭವದ ಲೀಲೆ.

ಶೇಷ ಶಯನ ನೀನು. ಗರುಡ ಗಮನ ನೀನು. ಗರುಡ ಶೇಷ ರುದ್ರಾದಿಗಳು ನಿನ್ನ ಕಿಂಕರರು. ಬ್ರಹ್ಮ, ವಾಯುಗಳು ದಾಸರು. ನಾರದರು ಗಾನದಿ ನಿನ್ನ ನಿರಂತರ ಕೊಂಡಾಡಿ ಸ್ತುತಿಸುವರು.

ಇಂಥ ಸರ್ವೋತ್ತಮ ಪ್ರಭು ನೀನು. ಸ್ವತಂತ್ರ ಸ್ವಾಮಿ ನೀನು. ಪರಮ ನೀನು. ಗುಣಪೂರ್ಣ, ನಿರ್ದೋಷ ದೊರೆ ನೀನು.

ಅವರ, ಅಸ್ವತಂತ್ರ, ಗುಣವಿಹೀನ ಪಾಮರ ನಾನು.  ಇಂಥ ನಾನು, ಅಂಥ ನಿನ್ನನ್ನು ಮೆಚ್ಚಿಸುವ ಪರಿ ಎಂತು?

ಅನೇಕ ಬಗೆ ವಿಚಾರಿಸುತ್ತೇನೆ. ಏನು ಮಾಡಿದರೂ ಕಡಿಮೆ ಕಡಿಮೆ ಕಡಿಮೆಯೇ !

ಇಲ್ಲಿ ದಾಸರಾಯರು ಆರಾಧನೆಯ ಕೆಲವು ಬಗೆಗಳನ್ನು ವಿಚಾರಿಸಿ ಹಲವು ಬಗೆಗಳನ್ನು ಸೂಚಿಸುತ್ತಾರೆ. ಅರ್ಘ್ಯ, ಪಾದ್ಯ, ಆಚಮನ, ಅಭಿಷೇಕ, ಅಲಂಕಾರ, ಆರತಿ, ನೈವೇದ್ಯ, ಷೋಡಷೋಪಚಾರ, ಸಮರ್ಪಣೆಗಳಿಂದ ಹರಿಯ ಆರಾಧನೆ.  ಶ್ರವಣ, ಮನನ, ಕೀರ್ತನ, ದಾಸ್ಯ, ಧ್ಯಾನಾದಿ ನವವಿಧ ಭಕ್ತಿ ಮಾಡಲು ಬೇಕು.  ಜ್ಞಾನ, ಭಕ್ತಿ, ವಿರಕ್ತಿಗಳು ಬೇಕು.

ಇಷ್ಟೆಲ್ಲ ಮಾಡುವ ಬಲು ಭಕ್ತರು ಅಪಾರವಾಗಿ ಉಂಟು ಶ್ರೀಹರಿಗೆ.  ಅವರಲ್ಲಿ ಶ್ರೇಷ್ಠರುಂಟು.  ಮುಂದೆ ಮುಂದೆ ಮಹಾ ಮಹಿಮರುಂಟು.  ತಾರತಮ್ಯ ಉಂಟು.  ಅವರೆಲ್ಲರ ಮುಗಿಯದ ಸಾಲು ಸಾಲು ಉಂಟು.

ಎಲ್ಲ ಬಿಡಿ, ಸ್ವತಃ ರಮಾದೇವಿ ತಾನೇ ಸರ್ವ ಬಗೆಯಿಂದ ಸರ್ವಬಗೆಯಾಗಿ ತನ್ನ ರಮಣ ಶ್ರೀಹರಿಯನ್ನು ಕ್ಷಣ ಬಿಡದೇ ಸೇವಿಸುತ್ತಾಳೆ.  ಪೂಜಿಸುತ್ತಾಳೆ.  ಆರಾಧಿಸುತ್ತಾಳೆ.  ವೈಕುಂಠವಾಗುತ್ತಾಳೆ. ಅರಮನೆಯಾಗುತ್ತಾಳೆ. ಸಿರಿಮನೆಯಾಗುತ್ತಾಳೆ. ಅಡುಗೆ ಮಾಡುತ್ತಾಳೆ. ನೈವೇದ್ಯ ಮಾಡುತ್ತಾಳೆ. ಬಡಿಸುತ್ತಾಳೆ.  ಕೂತು ತನ್ನ ಪತಿಗೆ ಮುದ್ದಿಲಿ ಉಣಿಸುತ್ತಾಳೆ.  ತನ್ನ ರಮಣನ ಆಭರಣಗಳಾಗುತ್ತಾಳೆ. ಆಯುಧಗಳಾಗುತ್ತಾಳೆ. ಅಲಂಕಾರಗಳಾಗುತ್ತಾಳೆ. ಆತನ ಮಂಚ, ಶಯನ ತಾನಾಗುತ್ತಾಳೆ. ಆತನಿಗೆ ಛತ್ರ ಹಿಡಿಯುತ್ತಾಳೆ.  ಚಾಮರ ಬೀಸುತ್ತಾಳೆ.  ವ್ಯಜನ ಪರಿಯಂತ ತಾನಾಗಿ ಆನಂದದಿ ಸೇವೆ ಮಾಡುತ್ತಾಳೆ. ಧನ್ಯ ಮಾನ್ಯಳು ಮಹಾಲಕ್ಷ್ಮೀದೇವಿ.

ಅವಳ ತರುವಾಯ ಹರಿಸೇವೆಗಾಗಿ ಹರಿದಾಸರ ಬ್ರಹ್ಮ, ಗರುಡ, ಶೇಷ, ರುದ್ರ, ಇಂದ್ರಾದಿ ದೇವತೆಗಳ ಸಾಲು ಸಾಲೇ ನಿಂತಿದೆ. ಇಂತಹ ವೈಭವ ಆತನದು. ನಾನೊಂದು ಅಣು. ಎಂತು ಪೂಜಿಸಲಿ ಮೆಚ್ಚಿಸಲಿ ಅನಂತಮಹಿಮನ !

**ಮಂಗಳಾಭಿಷೇಕಕೆ ಉದಕ ತರುವೆನೆನೆ**
**ಗಂಗೆಯಂಗುಷ್ಟದಿ ಪಡೆದಿರುವೇ**
**ಸಂಗೀತ ಕೀರ್ತನೆ ಪಾಡುವೆನೆಂದರೆ**
**ತುಂಬುರು ನಾರದರು ಪಾಡುತಿಹರೋ ದೇವ     || 1 ||**

ಹರಿಯ ಮಹಾತ್ಮೆ ಹಾಡುತ್ತ ಸಾಗುತ್ತಾರೆ ದಾಸರು.  ಪರಮಾತ್ಮನಿಗೆ ಅಭಿಷೇಕ ಮಾಡಿ ಮೆಚ್ಚಿಸೋಣ. ಅದಕ್ಕಾಗಿ ಪವಿತ್ರ ಜಲ ಬೇಕು.  ತರಲು ಹೊರಟರೆ –

**ಪವಿತ್ರಾಣಾಂ ಪವಿತ್ರಂ –** ಸ್ವಾಮಿ, ಪವಿತ್ರತಮ ನೀನು.  ಮಂಗಲಕೆ ಮಂಗಲ ನೀನು.  ನಿನ್ನ ಪಾದದ ಬೆರಳಿನ ಉಗುರಿನ ತುದಿಯಿಂದ ಜನಿಸಿದವಳು ಗಂಗೆ. ಜಗತ್ತನ್ನೇ ಪಾವನೀಕರಿಸುತ್ತಾಳೆ ನಿನ್ನ ಅನುಗ್ರಹದಿಂದ.

ಅವಳು ತನ್ನ ಜಲದಿಂದ ನಿನ್ನ ಪಾದಕಮಲ ಸದಾ ತೊಳೆಯುತ್ತಿರಲು – ಪರಮ ಪಾವನಕರ ಅಭಿಷೇಕ ಮಾಡುತ್ತಿರಲು, ಇನ್ನೆಂಥ ಪಾವನ ನೀರು ನಾ ತರಲು ಸಾಧ್ಯ?

ಪಾಮರ ಮನುಜನ ಅಲ್ಪತ್ವವನ್ನು ದಾಸರು ತೋರಿಸುತ್ತಾರೆ.  ಜೊತೆಗೆ ಶ್ರೀಹರಿಯ ವಾಮನಾವತಾರದ ಮಹಾಮಹಿಮೆಯನ್ನೂ ಸೂಚಿಸುತ್ತಾರೆ.  ಉಪಲಕ್ಷಣತಯಾ ದಶಾವತಾರಗಳ ಮಹಾತ್ಮೆಯನ್ನೂ ಭಾಗವತರ ಸ್ಮರಣೆಗೆ ತರುತ್ತಾರೆ.

ಸಂಗೀತ ಕೀರ್ತನೆಯಿಂದ ನಿನ್ನ ಆರಾಧಿಸಲು ಹೊರಟರೆ ಎಲ್ಲಿರುವೆ ನಾನು?  ತುಂಬುರುರು, ನಾರದರು, ಗಂಧರ್ವರು ಸುಮಧುರವಾಗಿ ನಿನ್ನನ್ನು ಹಾಡಿ ಆನಂದಿಸುತ್ತಿದ್ದಾರೆ.  ಬ್ರಹ್ಮ ವಾಯ್ವಾದಿ ಮಹಾನರು ವೇದ ಶಾಸ್ತ್ರಗಳಿಂದ ನಿನ್ನ ಸುಶ್ರಾವ್ಯವಾಗಿ ಸ್ತುತಿಸಿ ಮೆಚ್ಚಿಸುತ್ತಿದ್ದಾರೆ.  ಎಂಥ ವೈಭವದ ಮಹಿಮೆ ನಿನ್ನದು ಪ್ರಭು.  ಅವರ ಶ್ರೇಷ್ಠ ಗಾಯನಕ್ಕೆ ಮೆಚ್ಚುವವ ನೀನು.  ನನ್ನ ಕನಿಷ್ಠತೆಯಿಂದ ನಿನ್ನ ಮೆಚ್ಚಿಸುದು ಹ್ಯಾಗೆ ?

**ಪುಷ್ಪವ ತಂದು ನಿನಗರ್ಪಿಸುವೆನೆಂದರೆ**
**ಪುಷ್ಪ ಪಲ್ಲವಿಸಿದೆ ಹೊಕ್ಕುಳಲಿ**
**ಇಪ್ಪತ್ತೆತ್ತಿಸಕೋಟಿ ದೇವರ್ಕಳದ**
**ನೊಪ್ಪಿ ನೈವೇದ್ಯ ನೀಡಲು ತೃಪ್ತನಾಗುವೆ     || ೨ ||**

ಮನೆಯ ತೋಟದ ಹೂವುಗಳಿವೆ.  ಆ ಸುಂದರ ಪುಷ್ಪಗಳನ್ನು ತಂದು ನಿನಗೆ ಅಲಂಕರಿಸಿ, ಅರ್ಪಿಸಿ, ಆರಾಧಿಸೋಣ ಎಂಬ ಇಚ್ಛೆ.  ನೋಡಿದರೆ ಸಾಟಿಯಿಲ್ಲದ ಜಗನ್ಮೋಹಕ ಅದ್ವಿತೀಯ ಪದ್ಮಪುಷ್ಪ ನಿನ್ನ ಪೊಕ್ಕಳಿನಿಂದ ಹುಟ್ಟಿದೆ. ಮತ್ತೆ ಆ ಕಮಲದ ಹೂವು ಬ್ರಹ್ಮನಿಗೆ ಹುಟ್ಟು ಕೊಟ್ಟಿದೆ. ಮತ್ತೆ ಹದಿನಾಲ್ಕು ದಳದ ಆ ಪದ್ಮ ಮುಂದೆ ಹದಿನಾಲ್ಕು ಲೋಕದ ಪದ್ಮಜಾಂಡ – ಬ್ರಹ್ಮಾಂಡವಾಗುತ್ತದೆ.  ನಿನ್ನ ಸಾಟಿ ಇಲ್ಲದ ಸಾಮ್ರಾಜ್ಯವಾಗುತ್ತದೆ.  ನೀನು ಸಾರ್ವಭೌಮನೆಂದು ಸಾರುತ್ತದೆ.  ಇಂಥ ಪದ್ಮದ ನಾಭಿಯ ಪದ್ಮನಾಭ ನೀನು.  ಇನ್ನೆಂಥ ಹೂವು ತಂದು ನಾನು ಏರಿಸಲಿ, ಮೆಚ್ಚಿಸಲಿ ಪ್ರಭು ?

ದಾಸರು ಇಲ್ಲಿ ಪದ್ಮನಾಭನನ್ನು ಹೇಳುತ್ತ ಸೃಷ್ಟಿ ಸ್ಥಿತಿ ಲಯಾದಿಗಳ ಒಡೆಯ ಅನಂತಪದ್ಮನಾಭ ಎಂದು ಸೂಚಿಸುತ್ತಾರೆ. ದೇವರ ದೇವನ ಅಷ್ಟಕರ್ತತ್ವಗಳನ್ನು ಸ್ಮರಣೆಗೆ ತರುತ್ತಾರೆ.

ಇನ್ನು ಶ್ರೀಹರಿಗೆ ನೈವೇದ್ಯ ಮಾಡಿ ಮೆಚ್ಚಿಸೋಣ. ವಿಚಾರಿಸಿ ನೋಡಲು ಏನು ನೈವೇದ್ಯದ ವೈಭವ ಆತನದು! ಮಹಾಲಕ್ಷ್ಮೀ ಸ್ವತಃ ತಯಾರಿಸಿದ ಮತ್ತೆ ತಾನೇ ಬಡಿಸುವ ಭೂರಿ ಭೋಜನದ ನೈವೇದ್ಯವದು.

ಪ್ರಳಯಕಾಲದಲಿ ಬರಹ್ಮಾಂಡವೇ ಹೊನ್ನ ಪಾತ್ರೆ. ಸಕಲ ಚರಾಚರಗಳು ಪದಾರ್ಥಗಳು. ಲಕ್ಷ್ಮೀದೇವಿ ಪಾಕಪ್ರವೀಣೆ. ನಿಂತು ತಯಾರಿಸಿದ ರುಚಿಕಟ್ಟಾದ ಭೂರಿಭೋಜನ. ಬಾಯಿ ಚಪ್ಪರಿಸಿ ಸ್ವೀಕರಿಸುವ ಪ್ರಭು ನೀನು. ಇದು ನಿನ್ನ ಮಹಾನೈವೇದ್ಯ.

ನಿತ್ಯದಲಿ ಮೂವತ್ತೆರಡು ಕೋಟಿ ದೇವತೆಗಳು ಅರ್ಪಿಸುವ ವಿವಿಧ ಭಾರಿ ನೈವೇದ್ಯ.
ನಾನು ಕೊಡುವ ತುತ್ತು ಅನ್ನದ ನೈವೇದ್ಯಕ್ಕೆ ಎಲ್ಲಿ ಸ್ಥಾನ ಪ್ರಭು? ಹೇಗೆ ಅರ್ಚಿಸಲಿ ಮೆಚ್ಚಿಸಲಿ?

**ಕೋಟಿ ಸೂರ್ಯರ ಪ್ರಭೆ ಮಿಗಿಲಾದಾತನಿಗೆಂದು**
**ದೀಪವನು ಹಚ್ಚಿದರೆ ಬೆಳಕಹುದೇ**
**ಸಾಟಿಗಾಣದೆ ಲಕ್ಷ್ಮಿ ಉರಸ್ಥಳವಾಗಿರೆ**
**ಲೋಷ್ಟ ಕಾಸು ಎಂತು ಕಾಣಿಕೆ ನೀಡೆಲೋ || ೩ ||**

ನಿನಗೊಂದು ದೀಪ ಹಚ್ಚುವೆ. ನಮ್ಮ ಸಾಧನೆಗೆ ದೀಪವಾಗು ಎಂದು ನೋಡಲು – ಜಗದೋಳ್ ಬೆಳಕು ಕೊಡುವವ ಸೂರ್ಯ. ಆತನ ಪ್ರಭೆಯೇ ಅಪಾರ. ಆದರೆ ಸೂರ್ಯನ ಬೆಳಕಿನ ಶಕ್ತಿಯ ಸೆಲೆ ನಿನ್ನದು. ನೀನು ಕೊಟ್ಟದ್ದು.

ಮತ್ತೆ ನಿನ್ನ ಪ್ರಭೆ ಎಂಥದ್ದು? ಕೋಟಿ ಸೂರ್ಯಪ್ರಭೆ, ನಿನ್ನ ಪ್ರಭೆಗೆ ಲೇಶಾಂಶ ಸಾಟಿಯಾಗದು. ಬರಿ ಕಣ್ಣಲ್ಲಿ ನೋಡಲಾಗದು. ಪ್ರಾಕೃತ ದೃಷ್ಟಿಗೆ ಮೀರಿದ್ದು. ಹೊಸ ಕಣ್ಣು ಹಚ್ಚಲೀ ಬೇಕು.
ಇಂಥ ದಿವ್ಯ ಪ್ರಭೆಯ ಎದುರಿಗೆ ನಾನಿಟ್ಟದ್ದು ಮಿಣುಕು ದೀಪವಲ್ಲವೇ?

ಮತ್ತೆ ಹರಿಗೆ ಪೂಜಿಸಿ, ಕಾಣಿಕೆ ಸಮರ್ಪಿಸೋಣ. ಮೆಚ್ಚಿಸೋಣ ಎಂದು
ಕಿಂಚಿತ್ ದಕ್ಷಿಣೆ ಇಡಲು ಹೊರಟೆ –
ಏನಾತನ ಸಂಪತ್ತಿನ ವೈಭವ! ಈ ಜಗ ಸಂಪತ್ತು ಭರಿತ. ಜಗದ ಸಂಪತ್ತಿನ ಒಡೆಯಳು ಲಕ್ಷ್ಮೀದೇವಿ. ಅವಳ ಒಡೆಯ ಶ್ರೀಹರಿ. ಅವಳು ಇವನ ವಕ್ಷಸ್ಥಳ ನಿವಾಸಿನಿ. ಸಕಲ ಸಂಪತ್ತು ಈತನದು.
ಏನು ದಕ್ಷಿಣಿ ಕೊಡಬೇಕು ದಕ್ಷಿಣಾಪತಿಗೆ!

ಆದರೂ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಪಡೆಯಿರೋ' ಎಂಬಂತೆ –
ಅವನು ಕೊಟ್ಟದ್ದನ್ನೇ ಅವನಿಗಾಗಿ ಇಟ್ಟರೇ, ಅನಂತ ಮಡಿ ಮಾಡಿ ಮರಳಿ ಕೊಡುವ ಉದಾರನೀತ. ಕರುಣಾಶಾಲಿ ಈತ.

**ಹಾಸಿಗೆಯನು ತಂದು ಹಾಸುವೆನೆಂದರೆ**
**ಶೇಷನ ಮ್ಯಾಲೆ ನೀ ಪವಡಿಸಿರ್ಪೆ**
**ಬೀಸಣಿಗೆಯ ತಂದು ಬೀಸುವೆನೆಂದರೆ**
**ಬೀಸುತಿಹನು ಖಗ ತನ್ನ ಪಕ್ಕದಲೀ || ೪ ||**

ಕೊನೆಗೆ ತೊಟ್ಟಿಲು ಸೇವೆ – ಶಯನೋತ್ಸವ ಮಾಡೋ ಶ್ರೀಹರಿಗೆ ಎಂದರೆ –
ಬಹು ಮುಂದಿನ ಸಾಲಿನಲ್ಲಿರುವ ಶೇಷದೇವ ಸುಖದಾಯಕ ಶಯನನಾಗಿದ್ದಾನೆ ಸುಖಪೂರ್ಣ ಅನಂತನಿಗೆ. ಅದಕ್ಕಾಗಿಯೇ ಶೇಷಶಾಹಿ ಎಂದು ಸುಪ್ರಸಿದ್ಧನಲ್ಲವೇ ನಮ್ಮ ದೇವರದೇವ !

ಮತ್ತೆ ನಾರಾಯಣನಿಗೆ ಛತ್ರ ಚಾಮರ ಸೇವೆ ಮಾಡೋಣ. ಬೀಸಣಿಕೆ ತಂದು ಗಾಳಿ ಹಾಕೋಣ ಎಂದರೆ ನೋಡಿ – ಸುಪರ್ಣಗಳನ್ನು ವಿಶಾಲವಾಗಿ ಬಿಚ್ಚಿ ತಂಗಾಳಿ ಬೀಸುತಿಹನು ಗರುಡ ತನ್ನೊಡೆಯನಿಗೆ.

ಹೀಗೆ ಲಕ್ಷ್ಮೀ, ಬ್ರಹ್ಮ, ಸಮೀರ, ವಾಣಿ, ಫಣೀಂದ್ರ, ವೀಂದ್ರ ಭವ, ಇಂದ್ರಾದಿ ದೇವಾನುದೇವತೆಗಳು, ಮಹಾಮಹಿಮರು ಹರಿಯ ಚರಣಕಮಲದಲಿ ಶಿರವಿಟ್ಟು ವೈಭವ, ಅತಿ ವೈಭವದಿಂದ ಬಗೆ ಬಗೆಯಾಗಿ ಹರಿಯ ಆರಾಧಿಸುತ್ತಾರೆ, ಮೆಚ್ಚಿಸುತ್ತಾರೆ.

ದಾಸವರೇಣ್ಯರು ಹೇಳುತ್ತಾರೆ – ನಾನು ಪಾಮರ ಮನುಜ. ಅಲ್ಪ ಯೋಗ್ಯತೆ. ಆದರೂ ನನ್ನ ಅಲ್ಪ ಶಕ್ತಿ, ಜ್ಞಪ್ತಿ, ವೈಭವದಂತೆ ನಾನು ಹರಿಯನ್ನು ಆರಾಧಿಸ ಬೇಕು.

**ನಿತ್ಯ ಗುಣಾರ್ಣವ ನಿಜಗುಣ ಪರಿಪೂರ್ಣ**
**ಸಚ್ಚಿದಾನಂದ ಸನಕಾದಿವಂದ್ಯ**
**ಮುಕ್ತಿದಾಯಕ ನಮ್ಮ ಪುರಂದರ ವಿಠಲ**
**ಭಕ್ತಿದಾಯಕನೆಂದು ಸ್ತುತಿಸಿ ಕೊಂಡಾಡುವೆನೋ || ೫ ||**

ಪರಮಾತ್ಮ ಕರುಣಾಸಾಗರ. ಶಕ್ತಿ, ಯುಕ್ತಿ, ಬಲ, ಸಿರಿ, ವೈಭವಗಳಿಗೆ ಸಿಲುಕುವನಲ್ಲ. ಬಲು ಭಕ್ತಿಗೆ ನಿಲುಕುವನು.

ಆತ ಗುಣ ಸಾಗರ. ಕರುಣಾಸಾಗರ. ಕಲ್ಯಾಣಗುಣ ಪರಿಪೂರ್ಣ. ಜ್ಞಾನ ಪ್ರಿಯ, ಸಚ್ಚಿದಾನಂದಮಯ. ಶ್ರವಣ, ಮನನ, ಅಧ್ಯಯನಗಳಿಂದ ಅವನ ಈ ಮಹಾತ್ಮೆಯ ಜ್ಞಾನ ಪಡೆಯ ಬೇಕು.

ಅವನಲ್ಲಿ ಅಪರಿಮಿತ ಪ್ರೀತಿ, ಸ್ನೇಹ, ಗೌರವ, ಆದರ – ಅಂದರೆ ಭಕ್ತಿ ಮಾಡಬೇಕು. ಆತ ದಯಾನಿಧಿ. ಬೇರೇನೂ ನೊಡ. ಏನು ಕೊಟ್ಟ ಕುಚೇಲ? ಹಿಡಿ ಅವಲಕ್ಕಿ. ಬಹು ಭಕ್ತಿ. ಕೃಷ್ಣ ಮೆಚ್ಚಿದ.
ಬರಿಕೈ ಶಬರಿ. ಅಲ್ಲೇ ಬೆಳೆದಿದ್ದ ಬಾರೆಹಣ್ಣು. ಹಣ್ಣಿನಲ್ಲಿ ಭಕ್ತಿ ತುಂಬಿದಳು. ರಾಮನಿಗೆ ಅರ್ಪಿಸಿದಳು. ಬಲು ಮೆಚ್ಚಿದ ರಾಮ.

ಕರಿರಾಜ ಕಮಲಪುಷ್ಪ ಏರಿಸಿದ. ವಿಷ್ಣು ಮೆಚ್ಚಿದ. ಸಂಕಟ ನಿವಾರಿಸಿದ**. 'ಪತ್ರಂ ಪುಷ್ಪಂ ಫಲಂ ತೋಯಂ'** ಭಕ್ತಿಯಿಂದ ಅರ್ಪಿಸಬೇಕು. ಅಷ್ಟೇ ಸಾಕು. ಭಕ್ತವತ್ಸಲ ಆತ. ಸನಕಾದಿ ವಂದ್ಯ ವಿಠ್ಠಲ ಮುಕ್ತಿದಾಯಕ. ನಮ್ಮ ಸಾಧನೆ ಅಲ್ಪ. ಅವನ ಒಲುಮೆ ಅಪಾರ.

ಮಗುವಿನದು ತೊದಲುನುಡಿ. ಆದರೂ ತಾಯಿ ಮೆಚ್ಚುತ್ತಾಳೆ. ಈತ ಜಗದ ತಾಯಿ. ತಾಯಿಗಿಂತ ಕರುಣಾಮಯಿ. ಜಗದೊಡೆಯನನ್ನು ನಮ್ಮ ಅಲ್ಪವಾದರೂ ಜ್ಞಾನ ಭಕ್ತಿಯಿಂದ ಅರ್ಚಿಸಬೇಕು ಆರಾಧಿಸ ಬೇಕು. ಮೆಚ್ಚಿಸಬೇಕು. ಇದು ದಾಸವರೇಣ್ಯರ ಸಂದೇಶ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ